## ಸಂಸತ್ ಕಲಾಪದ ಕೊನೆಯ ದಿನ ಎಂಟು ವಿಧೇಯಕಗಳಿಗೆ ಅಸ್ತು

# ಬಿಲ್ ಭರಪೂರ, ಅಧಿವೇಶನ ಅಂತ್ಯ


**ಹೊಸದಿಲ್ಲಿ:** ಸಂಸತ್‌ನ ಮುಂಗಾರು ಅಧಿವೇಶನದ ಕೊನೆ ದಿನವಾದ ಬುಧವಾರ ಎಂಟು ಮಹತ್ವದ ವಿಧೇಯಕಗಳಿಗೆ ಅನುಮೋದನೆ ಲಭಿಸಿದೆ. ವೃತ್ತಿಪರ ಸುರಕ್ಷತೆ, ಆರೋಗ್ಯ ರಕ್ಷಣೆ, ಕೆಲಸ ನಿರ್ವಹಣೆ, ಕೈಗಾರಿಕಾ ಸಂಬಂಧಗಳ ನಿರ್ವಹಣೆ ಹಾಗೂ ಸಾಮಾಜಿಕ ಭದ್ರತೆ ಮತ್ತು ವಿದೇಶಿ ದೇಣಿಗೆ ನಿಯಂತ್ರಣ ವಿಧೇಯಕಗಳು ರಾಜ್ಯಸಭೆಯ ಅನು ಮೋದನೆ ಪಡೆದಿವೆ.

ಮಂಗಳವಾರ 7 ಮತ್ತು ಬುಧವಾರ 8 ಸೇರಿ ಎರಡು ದಿನಗಳಲ್ಲಿ ಒಟ್ಟು 15 ವಿಧೇಯಕಗಳು ಸಂಸತ್ತಿನಲ್ಲಿ ಅಂಗೀಕಾರಗೊಂಡಿರುವುದು ದಾಖಲೆ ಎನಿಸಿದೆ. ರಾಜ್ಯಸಭೆಯನ್ನು ಅನಿರ್ದಿಷ್ಟಾವಧಿಗೆ ಮುಂದೂಡುವ ಮುನ್ನ ಮಾತನಾಡಿದ ಸಭಾಪತಿ ಎಂ.ವೆಂಕಯ್ಯ ನಾಯ್ಡು ಎಂಟು ಸದಸ್ಯರನ್ನು ಅಮಾನತು ಗೊಳಿಸಿದ್ದು ಒಳ್ಳೆಯದಲ್ಲ ಎನಿಸಿದರೂ ಅವರ ವರ್ತನೆಯಿಂದಾಗಿ ಅದು ಅನಿವಾರ್ಯವಾಗಿತ್ತು. ಪ್ರತಿಪಕ್ಷಗಳಿಗೆ ಪ್ರತಿಭಟನೆ ಹಕ್ಕು ಇದೆ. ಆದರೆ ಯಾವ ರೀತಿ ನಡೆಸಬೇಕು ಎನ್ನುವುದನ್ನು ಅರಿತುಕೊಳ್ಳಬೇಕು. ಸದನದ ಘನತೆಗೆ ಧಕ್ಕೆಯಾಗದಂತೆ ಎಚ್ಚರಿಕೆ ವಹಿಸಬೇಕಿತ್ತು ಎಂದರು.

**ಎನ್‌ಜಿಒ ದೇಣಿಗೆ ಮೇಲೆ ನಿಗಾ:** ಕಾರ್ಮಿಕರಿಗೆ ಸಂಬಂಧಿತ ವಿಧೇಯಕಗಳ ಜತೆಗೆ ಬುಧವಾರ ಅನುಮೋದನೆ ಪಡೆದ ವಿದೇಶಿ ದೇಣಿಗೆ ನಿಯಂತ್ರಣ (ತಿದ್ದುಪಡಿ) ವಿಧೇಯಕದಿಂದಾಗಿ ಇನ್ಮುಂದೆ ಎನ್‌ಜಿಒಗಳ ಪದಾಧಿಕಾರಿಗಳು ನೋಂದಣಿ ವೇಳೆ ತಮ್ಮ ಆಧಾರ್ ಸಂಖ್ಯೆ ನೀಡುವುದು ಕಡ್ಡಾಯವಾಗಿದೆ. ಇದರಿಂದಾಗಿ ಎನ್‌ಜಿಒಗಳ ಹಣದ ವಹಿವಾಟಿನ ಬಗ್ಗೆ ತೀವ್ರ ನಿಗಾ ಇರಿಸಲು ಅನುಕೂಲವಾಗಲಿದ್ದು, ಸಾಮಾಜಿಕ ಕಾರ್ಯದಲ್ಲಿ ನೈಜ ರೀತಿಯಲ್ಲಿ ತೊಡಗಿಸಿಕೊಂಡಿರುವ ಎನ್‌ಜಿಒಗಳಿಗೆ ಮತ್ತಷ್ಟು ಬಲ ಸಿಗಲಿದೆ. ವಿದೇಶಿ ದೇಣಿಗೆಯ ಶೇ.20ರಷ್ಟು (ಮುಂಚೆ 50% ಇತ್ತು) ಹಣವನ್ನು ಆಡಳಿತಾತ್ಮಕ ವೆಚ್ಚಗಳಿಗೆ ಬಳಸಿಕೊಳ್ಳಬೇಕು ಎಂದು ವಿಧೇಯಕ ನಿಯಂತ್ರಣ ಹೇರಲಿದೆ.

**ಅಧಿವೇಶನ 100% ಫಲಪ್ರದ:** ರಾಜ್ಯಸಭೆಯಲ್ಲಿ 25 ವಿಧೇಯಕಗಳು ಅನುಮೋದನೆ ಪಡೆಯುವುದರ ಜತೆಗೆ ಆರು ಇತರ ವಿಧೇಯಕಗಳ ಮಂಡನೆಯಾದ ಹಿನ್ನೆಲೆಯಲ್ಲಿ [illegible] ಮುಂಗಾರು ಅಧಿವೇಶನ ಶೇ.100ರಷ್ಟು ಫಲಪ್ರದವಾಗಿದೆ. ಆದರೆ ಬುಧವಾರದಂದೇ ಮೇಲ್ಮನೆಯ ಕಲಾಪ ಗಳನ್ನು ಅನಿರ್ದಿಷ್ಟಾವಧಿಗೆ ಮುಂದೂಡಲಾಗಿದೆ.

ಅಕ್ಟೋಬರ್ 1ಕ್ಕೆ ಕೊನೆಗೊಳ್ಳಬೇಕಿದ್ದ ಅಧಿವೇಶನ ಸೆ.23ಕ್ಕೆ ಅಂತ್ಯಗೊಂಡ ಪರಿಣಾಮ 18ರ ಬದಲು 10 ಕಲಾಪಗಳು ಮಾತ್ರ ನಡೆದವು. ಕಳೆದ ಹಲವು ವರ್ಷಗಳಲ್ಲಿ ವಿಧೇಯಕಗಳ ಚರ್ಚೆಗೆ ಸರಾಸರಿ 28% ಸದನದ ಅವಧಿ ಬಳಕೆಯಾಗಿದೆ. ಆದರೆ ಈ ಬಾರಿ ದಾಖಲೆಯ 58% ಸಮಯ ಬಳಕೆಯಾಗಿರುವುದು ಉತ್ತಮ ಬೆಳವಣಿಗೆ ಎಂದು ಸಭಾಪತಿ ವೆಂಕಯ್ಯನಾಯ್ಡು ತಮ್ಮ ಭಾಷಣದಲ್ಲಿ ಉಲ್ಲೇಖಿಸಿದರು.




ಕೃಷಿ ಮತ್ತು ಕಾರ್ಮಿಕ ವಿಧೇಯಕಗಳನ್ನು ವಿರೋಧಿಸಿ ಸಂಸತ್ ಭವನದ ಮುಂದೆ ಮೌನ ಮೆರವಣಿಗೆ ನಡೆಸಿದ ಪ್ರತಿಪಕ್ಷ ಸದಸ್ಯರು.

### ಮೌನ ಮೆರವಣಿಗೆ

ಕೃಷಿ ವಿಧೇಯಕಗಳನ್ನು ಹಿಂಪಡೆಯಲು ಸರಕಾರ ತಿರಸ್ಕರಿಸಿದ ಹಿನ್ನೆಲೆಯಲ್ಲಿ ಸತತ ಎರಡನೇ ದಿನವೂ ಕಲಾಪ ಬಹಿಷ್ಕರಿಸಿದ ಪ್ರತಿಪಕ್ಷ ಸದಸ್ಯರು, ಸಂಸತ್ ಆವರಣದಲ್ಲಿ ಮೌನ ಮೆರವಣಿಗೆ ನಡೆಸಿದರು. ರಾಜ್ಯಸಭೆ ಪ್ರತಿಪಕ್ಷ ನಾಯಕ ಗುಲಾಂ ನಬಿ ಆಜಾದ್ ನೇತೃತ್ವದಲ್ಲಿ ಟಿಎಂಸಿ ಸಂಸದ ಡೆರಿಕ್ ಒಬ್ರಿಯನ್, ಸಮಾಜವಾದಿ ಪಕ್ಷದ ಜಯಾ ಬಚ್ಚನ್, ಸಿಪಿಐ, ಡಿಎಂಕೆ, ಆರ್‌ಜೆಡಿ, ಆಪ್, ಎನ್‌ಸಿಪಿ ಸಂಸದರು ಮೆರವಣಿಗೆಯಲ್ಲಿ ಭಾಗವಹಿಸಿದ್ದರು. 'ಕೃಷಿಕರನ್ನು ರಕ್ಷಿಸಿ, ಪ್ರಜಾಪ್ರಭುತ್ವ ಉಳಿಸಿ' ಎಂಬ ಭಿತ್ತಿಫಲಕಗಳನ್ನು ಪ್ರತಿಪಕ್ಷ ನಾಯಕರು ಪ್ರದರ್ಶಿಸಿದರು.

ಸ್ವಾಮಿನಾಥನ್ ಆಯೋಗದ ವರದಿ



ಅನುಷ್ಠಾನಕ್ಕೆ ನರೇಂದ್ರ ಮೋದಿ ನೇತೃತ್ವದ ಸರಕಾರ ಬದ್ಧವಾಗಿದೆ. ಈಗಾಗಲೇ 2020-21ನೇ ಸಾಲಿಗೆ ಕನಿಷ್ಠ ಬೆಂಬಲ ಬೆಲೆಯನ್ನು (ಎಂಎಸ್‌ಪಿ) ಘೋಷಿಸಲಾಗಿದೆ. ಎಂಎಸ್‌ಪಿ ಮುಂದುವರಿಸುವುದು ನಾವು ಕೃಷಿಕರಿಗೆ ನೀಡುವ ಸಾಂವಿಧಾನಾತ್ಮಕ ಪ್ರಮಾಣ.

- ಸ್ಮೃತಿ ಇರಾನಿ, ಕೇಂದ್ರ ಸಚಿವೆ

### 5 ಭಾಷೆಗಳಿಗೆ ಅಧಿಕೃತ ಸ್ಥಾನಮಾನ

ನೂತನವಾಗಿ ಕೇಂದ್ರಾಡಳಿತ ಪ್ರದೇಶದ ಸ್ಥಾನಮಾನ ಪಡೆದಿರುವ ಜಮ್ಮು ಮತ್ತು ಕಾಶ್ಮೀರದಲ್ಲಿ ಕಾಶ್ಮೀರಿ, ಡೋಗ್ರಿ, ಹಿಂದಿ, ಇಂಗ್ಲಿಷ್ ಹಾಗೂ ಉರ್ದು ಭಾಷೆಗಳಿಗೆ ಅಧಿಕೃತ ಭಾಷೆಗಳ ಮಾನ್ಯತೆ ನೀಡುವ ವಿಧೇಯಕಕ್ಕೆ ರಾಜ್ಯಸಭೆಯಲ್ಲಿ ಧ್ವನಿಮತದ ಅನುಮೋದನೆ ಸಿಕ್ಕಿತು. ಈ ರಾಜ್ಯದಲ್ಲಿ 1954ರಿಂದ ಕೇವಲ ಉರ್ದು ಮತ್ತು ಇಂಗ್ಲಿಷ್ ಭಾಷೆಯನ್ನು ಅಧಿಕೃತ ಕಾರ್ಯಗಳಿಗಾಗಿ ಬಳಸಲಾಗುತ್ತಿತ್ತು.

### ರಾಷ್ಟ್ರಪತಿ ಭೇಟಿಯಾದ ಆಜಾದ್

ಬುಧವಾರ ಸಂಜೆ ವೇಳೆ ಪ್ರತಿಪಕ್ಷಗಳ ನಿಯೋಗದ ಪರವಾಗಿ ರಾಷ್ಟ್ರಪತಿ ರಾಮನಾಥ್ ಕೋವಿಂದ್ ಅವರನ್ನು ಭೇಟಿಯಾದ ಕಾಂಗ್ರೆಸ್ ನಾಯಕ ಗುಲಾಂ ನಬಿ ಆಜಾದ್ ಅವರು, ಸರಕಾರ ಕಳುಹಿಸಿಕೊಡುವ ಕೃಷಿ ವಿಧೇಯಕಗಳಿಗೆ ಅಂಕಿತ ಹಾಕಬೇಡಿ ಎಂದು ಮನವಿ ಮಾಡಿದರು.

ಕೃಷಿ ವಿಧೇಯಕಗಳ ಅನುಮೋದನೆ ವೇಳೆ ಧ್ವನಿ ಮತ ನಡೆದಿಲ್ಲ. ಮತಗಳ ವಿಭಜನೆಯೂ ಆಗಿಲ್ಲ. ಅಸಾಂವಿಧಾನಿಕ ರೀತಿಯಲ್ಲಿ ಏಕಪಕ್ಷೀಯ ನಿರ್ಧಾರವಾಗಿ ಸರಕಾರ ಕೃಷಿ ವಿಧೇಯಕಗಳಿಗೆ ಅನುಮೋದನೆ ಪಡೆದುಕೊಂಡಿದೆ. ಕೂಡಲೇ ಬಿಲ್‌ಗಳನ್ನು ಹಿಂದಕ್ಕೆ ಕಳುಹಿಸಿ ಎಂದು ಆಜಾದ್ ಅವರು ರಾಷ್ಟ್ರಪತಿಗೆ ಕೋರಿಕೆ ಸಲ್ಲಿಸಿದರು.